Sri MOHAMED ALI.—I cannot say that all the buses are running in time. Some of them may be behind schedule. If any specific question is put, I will be able to give a specific reply. So far as services are concerned, the private operators were running 112 schedules whereas the Road Transport Corporation is running about 316 schedules.

MR. SPEAKER.—Sri Nanje Gowda may put Question No. 389 on behalf of Sri L. Sreekantiah.

Surplus land available for cultivation after Ceiling

389. Sri H. N. NANJE GOWDA (Arkalgud [On behalf of SRI L. SRIKANTAIAH (Nanjangud)].—

Will the Minister for Revenue be pleased th state :—

(*a*) the surplus land, above ceiling that is avaliable for distribution in each of the Districts of the State consequent to the introduction of Land Reforms Act ;

(*b*) the extent of dry, wet and bagayat that comes under this surplus (Districtwise figures may be given) ;

(*c*) the estimated number of tenants who are likely to become owners consequent to the non-resumption clause in the Land Reforms Act ;

(*d*) of such tenants, the number of tenants cultivating land, *viz.*—

(i) less than one acre of wet or dry or bagayat land ;

(ii) less than two acres of wet or dry or bagayat land ;

(iii) less than three acres of dry or wet or bagayat land ;

(iv) less than four acres of dry or wet or bagayat land ;

(v) less than five acres of dry or wet or bagayat land Districtwise figure may be given) ?

Sri H. V. KOUJALGI (Ministes for Revenue).—

(*a*) and (*b*) The ceiling provisions are yet to be brought into force. The extent of surplus land can be known only after the ceiling provisions are implemented.

(*c*) and (*d*) The extent of non-resumable land is yet to be determined by the Land Tribunals constituted under the Mysore Land Reforms Act, 1961. When the Land Tribunals dispose of all the resumption statements on their files and Government issue Notification of vesting of land in Government under Section 44, it may be possible to furnish information on clauses (*c*) and (*d*).

ಶ್ರೀ ಎಚ್. ಎನ್. ನಂಜೇಗೌಡ.—ಲ್ಯಾಂಡ್ ರಿಫಾರಮ್ಸ್ ಸೀಲಿಂಗ್ ಆಕ್ಟ್ ಪ್ರಕಾರ ಕೆಲವರಿಗೆ ವಿನಾಯಿತಿ ಕೊಡುವ ಸೂಚನೆ ಇದೆ. ಕಾಫಿ, ಟೀ, ಷುಗರ್‌ಕೇನಿಗೆ ವಿನಾಯಿತಿ ಸಿಕ್ಕಿದೆ. ಇದರಿಂದ ರೈತರಿಗೆ ಸರ್ಪ್ಲಸ್ ಜಮೀನು ಸಿಗುವ ಅವಕಾಶವೂ ಕಡಿಮೆಯಾಗಿದೆ. ರೈತರು ಕೋರ್ಟಿಗೆ ಹೋಗುವುದಕ್ಕೆ ಕಡಿಮೆ ಅವಕಾಶ ಮಾಡಲು ಇದನ್ನು ರಿವೀಲ್ ಮಾಡುವುದಕ್ಕೆ ಸರ್ಕಾರದವರು ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ?

Sri H. V. KOUJALGI.—No.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಅನೇಕ ಸಂದರ್ಭಗಳಲ್ಲಿ ಜೆನೆಂಟ್ಸ್ ಲ್ಯಾಂಡ್ ಲಾರ್ಡ್ಸ್‌ಗಿಂತ ಶ್ರೀಮಂತರಾಗುತ್ತಿದ್ದಾರೆ. ಅಂತಹ ಸಂದರ್ಭಗಳಲ್ಲಿ ಕೆಲವಾರು ಪ್ರಾಪಿಷನ್ಸ್‌ಗಳಿಂದ ವಿನಾಯಿತಿ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಸರ್ಕಾರದವರು ಕೂಲಂಕಷವಾಗಿ ಇದನ್ನು ಪರಿಶೀಲಿಸಿ ಈಗಲಾದರೂ ಒಂದು ತಿದ್ದುಪಡಿಯನ್ನು ತರುವುದಕ್ಕೆ ಯೋಚನೆಮಾಡುತ್ತಾರೆಯೇ ?

Sri H. V. KOUJALGI.—The tenant is entitled to hold lands up to the ceiling limit and that cannot be disturbed.

ಶ್ರೀ ಕೆ. ಎಚ್. ರಂಗನಾಥ್.—ಎ ಮತ್ತು ಬಿ ಗೆ ಉತ್ತರವಾಗಿ ಪರಿಮಿತಿಗೆ ಸಂಬಂಧಪಟ್ಟ ಉಪಬಂಧಗಳನ್ನು ಇನ್ನೂ ಜಾರಿಗೆ ತರಬೇಕಾಗಿದೆ. ನದರಿ ಪರಿಮಿತಿಗೆ ಸಂಬಂಧಪಟ್ಟ ಉಪಬಂಧಗಳನ್ನು ಕಾರ್ಯಗತಗೊಳಿಸಿದ ನಂತರವೇ ಹೆಚ್ಚುವರಿ ಜಮೀನಿನ ವಿಸ್ತೀರ್ಣವನ್ನು ತಿಳಿಯಬಹುದಾಗಿದೆ, ಎಂದು ಹೇಳಿದ್ದೀರಿ. ಈಗ ಕಾನೂನು ಜಾರಿಗೆ ಬಂದು ಹೆಚ್ಚು ಸಮಯವಾಗಿದೆ. ಈ ಪ್ರೊವಿಜನ್ನನ್ನು ಸರ್ಕಾರದವರು ಯಾವಾಗ ಜಾರಿಗೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ ?

Sri H. V. KOUJALGI.—The Act is in force since 1965. The exact area will have to be worked out after the provisions under section 14, 63 and 64 have been finalised.

ಶ್ರೀ ಅಜೀಜ್ ಸೇಠ್.—ಈ ಲ್ಯಾಂಡ್ ರಿಫಾರಂ ಆಕ್ಟ್ ಬಂದ ನಂತರ ಎರಡು ಎಕರೆ ಮೂರು ಎಕರೆ ಜಮೀನು ಇರುವಂತಹ ಲ್ಯಾಂಡ್ ಲಾರ್ಡ್ಸ್‌ಗೆ ಯಾವ ರೀತಿಯ ಉತ್ಪತ್ತಿಯೂ ಇಲ್ಲದೆ ಲ್ಯಾಂಡ್ ಟ್ರಿಬ್ಯೂನಲ್‌ನಿಂದಲೂ ಕೂಡ ಅನಾನುಕೂಲವಾಗಿದೆ. ಆದ್ದರಿಂದ ಎರಡು ಮೂರು ಎಕರೆ ಇರುವಂತಹ ಭೂಮಾಲೀಕರಿಗೆ ಕಂಪೆನ್ಸೇಶನ್ ಸ್ಕೈಟ್ ಅವೇ ಕೊಟ್ಟು ಸರ್ಕಾರದವರು ಏಕೆ ವಹಿಸಿಕೊಳ್ಳಬಾರದು ?

Sri H. V. KOUJALGI.—Compensation can be given only after section 14 has been implemented.

Sri A. R. BADRINARAYAN.—How long will it take for the Government to implement the provisions of this Act so that the tenants may be in a position to know what land will be given to them ?

Sri H. V. KOUJALGI. - It is very difficult to give a definite time. I have once told the House that it may take 4 to 5 years.

Sri H. SIDDAVEERAPPA.—Has it not come to the notice of Government that this period of suspension has done more harm than good to all sections both tenants and landlords ?

Sri H. V. KOUJALGI.—There is no period of suspension and so the other question does not arise.

ಶ್ರೀ ಎಂ. ನಾಗಪ್ಪ —ಈ ಭೂಮಿಯನ್ನು ಹೆಚ್ಚಾಗಿ ತೆಗೆದುಕೊಂಡು ಹಂಚತಕ್ಕ ವಿಚಾರದಲ್ಲಿ ಬಹಳ ವಿಳಂಬವಾಗುತ್ತದೆ ಎಂದು ತಿಳಿದುಕೊಂಡು ಕೇಂದ್ರದ ಪ್ರಧಾನಮಂತ್ರಿಯಾದಂತಹ ಇಂದಿರಾ ಗಾಂಧಿಯವರು ಸರ್ಕಾರಕ್ಕೆ ಏನಾದರೂ ಬರೆದಿದ್ದಾರೆಯೇ, ಹಾಗಿದ್ದರೆ, ಅದರ ಮೇಲೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ?

Sri H. V. KOUJALGI.—The Act has been passed and it is being implemented since 1965 and there is no question of delay.

ಶ್ರೀ ಪಿ. ವೆಂಟಗಿರಿಯಪ್ಪ.—ಕೆಲವು ಭೂಮಾಲೀಕರಿಗೆ ತೊಂದರೆಯಾಗಿದೆ ಎಂದು ಹೇಳಿ ರ್ಯಾಂಡ್ ರಿಫಾರಂ ಆಕ್ಟನ್ನು ಭೂಮಾಲೀಕರಿಗೆ ಅನ ಕೂಲವಾಗುವಹಾಗೆ ಮಾಡಲು ಸ್ವತಂತ್ರ ಪಾರ್ಟಿಯವರು ಪ್ರಭಾವವನ್ನು ಸರ್ಕಾರದವರಲ್ಲಿ ಬೀರುತ್ತಿದ್ದಾರೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಸ್ವಾಮಿ, ನಾನು ಅದನ್ನು ಪ್ರೊಜೆಕ್ಟ್ ಮಾಡುತ್ತೇನೆ. ಅವರು ಪಾರ್ಟಿಯ ಹೆಸರನ್ನು ಇಲ್ಲಿ ತಂದು ಸ್ವತಂತ್ರ ಪಾರ್ಟಿಯ ಪ್ರಭಾವಕ್ಕೆ ಸರ್ಕಾರ ಒಳಗಾಗಿದೆ ಎಂದು ಹೇಳುತ್ತಿದ್ದಾರೆ. ಅದು ಹೇಗೆ ಎಂದು ಅವರು ಹೇಳಬೇಕು.

Mr. SPEAKER.—Members should not make any allegation against any Party while putting questions.

ಶ್ರೀ ಪಿ. ವೆಂಕಟಗಿರಿಯಪ್ಪ.—ಸರಿ ಸ್ವಾಮಿ. ಸರ್ಕಾರದವರು ಕೆಲವು ಭೂಸ್ವಾಮಿಗಳ ಮತ್ತು ಅವರ ಹಿಡಿತದಲ್ಲಿರತಕ್ಕ ಕೆಲವು ರಾಜಕೀಯ ಪಕ್ಷಗಳ ಪ್ರಭಾವಕ್ಕೆ ಒಳಗಾಗಿ, ಕೆಲವು ಅಮೆಂಡ್‌ಮೆಂಟುಗಳನ್ನು ತಂದು ಭೂಸ್ವಾಮಿಗಳ ಹಿತರಕ್ಷಣೆ ಮಾಡುವ ವತ್ತು ತೆನೆಂಟುಗಳಿಗೆ ತೊಂದರೆಮಾಡುವ ಪ್ರಯತ್ನ ನಡೆಯುತ್ತಿರುವುದು ನಿಜವೇ ?

Sri H. V. KOUJALGI.—That is not the intention of Government.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಮೈಸೂರು ರಾಜ್ಯದಲ್ಲಿ, ದಕ್ಷಿಣಕನ್ನಡ ಜಿಲ್ಲೆ ಹೊಸ ಮೈಸೂರು ಪ್ರದೇಶ ಮತ್ತು ಹಳೆಯ ಮೈಸೂರು ಪ್ರದೇಶದಲ್ಲಿ ಭೂಸುಧಾರಣಾ ಕಾನೂನನ್ನು ಅನ್ವಯಿಸುವುದರಲ್ಲಿ ಕೆಲವು ಕ್ಲಿಷ್ಟ ಸಮಸ್ಯೆಗಳು ಬಂದಿರುವುದರಿಂದ ರ್ಯಾಂಡ್ ರಿಫಾರಮ್ಸ್ ಆಕ್ಟ್‌ನ್ನು ಸೂಕ್ತ ರೀತಿಯಲ್ಲಿ ಸರ್ಕಾರದವರು ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿದೆಯೇ ?

Sri H. V. KOUJALGI.—At present there is no intention to amend the Act in its present form.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಮಂತ್ರಿಗಳು ಈ ಭೂಸುಧಾರಣಾ ಕಾನೂನು 1965 ನೇ ಇಸವಿಯಿಂದ ಜಾರಿಗೆ ಬಂದಿದೆ, ಹೆಚ್ಚು ಕಾಲ ಆಗಿಲ್ಲ ಎಂದು ಹೇಳಿದರು, ಹಾಗಾದರೆ 4 ವರ್ಷಗಳ ಕಾಲ ಕಳೆದು ಹೋಗಿರುವುದು ಅಲ್ಪ ಕಾಲ ಎಂದು ಸರ್ಕಾರದವರು ಭಾವಿಸುತ್ತೀರಾ?

Sri H. V. KOUJALGI.—I have already stated that 24 courts and about 53 Munsiffs are working under this Act and considering their disposal. I think much time will not be taken.

ಶ್ರೀ ಬಿ. ಭಾನ್ಯರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಹೆಚ್ಚು ಇದ್ದು ಅದರಲ್ಲಿಯೂ ವಿಧವೆಯರು ಇದ್ದು ಅವರಿಗೆ ಗೇಣಿ ವಸೂಲಿಯಲ್ಲಿ ತುಂಬಾ ಕಷ್ಟವಾಗಿರುವುದರಿಂದ ಅವರಿಗೆ ಊಟಕ್ಕೂ ಕೂಡ ತೊಂದರೆಯಾಗಿರುವ ಪರಿಸ್ಥಿತಿ ಇರುವುದರಿಂದ ಸಣ್ಣ ಹಿಡುವಳಿದಾರರ ಬಗ್ಗೆ ಅನುಕೂಲವಾಗುವಂತೆ ತಾವು ಏನಾದರೂ ಒಂದು ತಿದ್ದುಪಡಿಯನ್ನು ತಂದು ಭೂಸುಧಾರಣಾ ಕಾನೂನನ್ನು ತಿದ್ದುಪಡಿ ಮಾಡುತ್ತೀರಾ ?

Sri H. V. KOUJALGI.—As far as widows are concerned, there is a specific provision under section 8 and there is no difficulty to recover rent. At present it is not the intention of Government to make any distinction between small and big landlords.

ಶ್ರೀ ಎಚ್. ಎನ್. ನಂಜೇಗೌಡ.—ಈಗ ತಾನೇ ಮಾನ್ಯ ಮಂತ್ರಿಗಳು ಹೇಳಿದರು ತೆನೆಂಟ್ಸ್ ಒಂದು ಸೀಲಿಂಗ್ ಲಿಮಿಟ್‌ವರೆಗೆ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಹಕ್ಕು ಉಂಟು ಎಂದು. ಹಾಗಾದರೆ ತೆನೆಂಟ್ಸ್ ಅವರಿಗೆ ಇರತಕ್ಕಂಥ ಹಕ್ಕಿನ ಪ್ರಕಾರ ಒಂದು ಸೀಲಿಂಗ್ ಲಿಮಿಟ್‌ವರೆಗೆ ಭೂಮಿಯನ್ನು ಇಟ್ಟುಕೊಂಡು ನಂತರ ಉಳಿದಿದ್ದರೆ ಭೂಮಾಲೀಕರಿಗಿಂತ ತೆನೆಂಟ್ಸ್ ದಡೂತಿ ಕುಳ ಆಗಿದ್ದರೆ ಅಂಥಾ ಸಮಯದಲ್ಲಿ ಅದನ್ನು ಕೊಟ್ಟೆಗೆ ಇಲ್ಲದೆ ತೊಂದರೆಪಡತಕ್ಕ ಭೂಮಾಲೀಕರಿಗೆ ಕೊಡಲು ಅನುಕೂಲವಾಗುವಂಥಹ ಬಂದು ತಿದ್ದುಪಡಿಯನ್ನು ತರುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಈಗ ಅಂಥ ತಿದ್ದುಪಡಿ ಮಾಡುವ ಯೋಚನೆ ಸರ್ಕಾರಕ್ಕೆ ಇಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ. 362 ಯನ್ನು ಶ್ರೀ ನಂಜೇಗೌಡರಿಗೆ ಅಪ್ಪಣೆ ಕೊಟ್ಟಾಗಿದೆ.